**OS No. 190/2018**
**ಡಿ.ಡಬ್ಲ್ಯೂಃ 1**

**ದಿನಾಂಕ 07-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿಯ ಪರ: ಶ್ರೀ ಎಮ್. ವಿ. ಕೆ ವಕೀಲರಿಂದಃ**

1. ಸದರಿ ನನ್ನ ಪ್ರತಿವಾದ ಪತ್ರದಲ್ಲಿ ಬೆಳಗುಂದಿ ಮತ್ತು ಚಟ್ನಳ್ಳಿ ಗ್ರಾಮದಲ್ಲಿ ಮಾತ್ರ ಆಸ್ತಿ ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಂದೆ ಮರಣ ಹೊಂದಿದ ನಂತರ ಮುದ್ನಾಳ ಗ್ರಾಮದ ಆಸ್ತಿಗಳು ಇರುತ್ತವೆ ಎಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಚಟ್ನಳ್ಳಿ ಗ್ರಾಮದ ಆಸ್ತಿ ನನ್ನ ಸಹೋದರರಿಗೆ ಮತ್ತು ನನ್ನ ಪಾಲಿಗೆ ಬಂದ ಬೆಳಗುಂದಿ ಗ್ರಾಮದ ಆಸ್ತಿಗಳು ಬಂದಿರುತ್ತವೆ ಎಂದರೆ ಸರಿ.

2. ಮುದ್ನಾಳ ಗ್ರಾಮದ ಜಮೀನ ಸರ್ವೆ ನಂಬರ 61 ಕ್ಷೇತ್ರ 14 ಎಕರೆ 30 ಗುಂಟೆ ಇರುತ್ತದೆ. ನನಗೆ ಜಮೀನ ಸರ್ವೆ ನಂಬರ 61 ರ ಚಕಬಂದಿ ಹೇಳಲು ಬರುವುದಿಲ್ಲ. ನಾನು ಜಮೀನ ಸರ್ವೆ ನಂಬರ 61 ನ್ನು ನೋಡಿರುವುದಿಲ್ಲ. ಸದರಿ ಜಮೀನ ಸರ್ವೆ ನಂಬರ 61 ಇದು ಹಿರಿಯರ ಆಸ್ತಿ ಇರುತ್ತದೆ. ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ. ಸದರಿ ನನ್ನ ತಾತನ ಹೆಸರಿನಲ್ಲಿರುವ ಪಹಣಿಗಳನ್ನು ನಾನು ನೋಡಿರುವುದಿಲ್ಲ. ನನ್ನ ತಾತನ ಊರು ಚಟ್ನಳ್ಳಿ ಎಂದರೆ ಸರಿ. ಸದರಿ ಜಮೀನ ಸರ್ವೆ ನಂಬರ 61 ಇದು ಮೂಲತಃ ಶರಣಮ್ಮ ಗಂಡ ಈರಪ್ಪಗೌಡ ಇವರಿಗೆ ಸೇರಿರುತ್ತದೆ ಎಂದರೆ ಸರಿ. ಶರಣಮ್ಮ ಇವಳು ನನ್ನ ತಂದೆಯ ತಾಯಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ. ಶರಣಮ್ಮ ಇವರು ನಮ್ಮ ದೂರದ ಸಂಬಂಧಿ ಇರುತ್ತಾರೆ ಎಂದರೆ ಸಾಕ್ಷಿಯು ಒಂದೇ ಕುಟುಂಬ ಇರುತ್ತಾರೆ ಎಂದು ನುಡಿಯುತ್ತಾರೆ. ಶರಣಮ್ಮ ಇವರಿಗೆ ನೂರಾರು ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಶರಣಮ್ಮ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಶರಣಮ್ಮ ಇವರ ಜಮೀನು ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಶರಣಮ್ಮ ಇವರು ಜಮೀನ ಸರ್ವೆ ನಂಬರ 61 ನ್ನು ನನ್ನ ತಂದೆಗೆ ದಾನ ನೀಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 61 ಇದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ.

3. ಜಮೀನ ಸರ್ವೆ ನಂಬರ 61 ಇದು ಶರಣಮ್ಮ ಮರಣದ ನಂತರ ಚನ್ನಬಸವರೆಡ್ಡಿ ಕಬ್ಜಾದಲ್ಲಿ ಇತ್ತು ಎಂದರೆ ಸಾಕ್ಷಿಯು ಲೀಜಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಲೀಜಿಗೆ ನೀಡಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 61 ರಲ್ಲಿ 6 ಎಕರೆ ಜಮೀನನ್ನು ಐಶ್ವರ್ಯ ಇವರಿಗೆ ಮತ್ತು 6 ಎಕರೆ ಲಕ್ಷ್ಮೀ ಗಂಡ ಚನ್ನಬಸವ ರೆಡ್ಡಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉಳಿದ ಜಮೀನನ್ನು ಇಬ್ಬರು ಹೆಣ್ಣುಮಕ್ಕಳಿಗೆ ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನು ಚನ್ನಬಸವ ರೆಡ್ಡಿ ಕಬ್ಜೆಯಲ್ಲಿ ಇತ್ತು ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 61 ಕ್ಕೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತೊಂದರೆ ಕೊಡುವ ಉದ್ದೇಶದಿಂದ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**